

ಭಿಕ್ಷುಕ: ಸ್ವಾಮಿ ಹತ್ತು ಪೈಸೆ ಕೊಡಿ

ಗುಂಡ: ಹತ್ತು ಪೈಸೆಗೆ ಏನಯ್ಯಾ ಬರುತ್ತೆ? ಇನ್ನೂ ಹೆಚ್ಚಿಗೆ ಬೇಡೋಕಾಗಲ್ವಾ?

ಭಿಕ್ಷುಕ: ನಾನು ಜನರ ಯೋಗ್ಯತೆ ತಿಳಿದು ಬೇಡುತ್ತೇನೆ ಸ್ವಾಮೀ.

★★★

ಗರ್ಭಿಣಿ ತಾಯಿ (ಮಗನಿಗೆ): ಲೋ ರವಿ ನಿನಗೆ ತಂಗಿ ಬೇಕೋ ತಮ್ಮ ಬೇಕೋ?

ಮಗ: ನಂಗೆ ನಾಯಿ ಮರಿ ಬೇಕು.

★★★

ಮಾಣಿ (ಊಟ ಬಡಿಸಿದ ಮೇಲೆ): ಸಾರ್ ಬಾಳೆ ಎಲೆ ಹರಿಯಬಾರದು. ಜೋಪಾನವಾಗಿರಲಿ. ಅದೇ ರೀತಿ ಊಟ ಮಾಡಬೇಕು.

ಗಿರಾಕಿ: ಯಾಕಯ್ಯಾ ಎಲೆ ಹರಿಯದೇ ಊಟ ಮಾಡು ಅಂತೀಯಾ?

ಮಾಣಿ: ಅದು ಹಾಗಲ್ಲಾ ಸಾರ್! ನೀವೊಬ್ಬರೇ ಊಟ ಮಾಡಿದರಾಯ್ತೇ? ಬೇರೇಯವರು ಊಟ ಮಾಡಬಾರದೇ? ನಿಮಗಿಂತ ಮೊದಲು ಊಟ ಮಾಡಿದವರು ಎಷ್ಟು ಕ್ಲೀನಾಗಿ ಊಟ ಮಾಡಿದ್ದಾರೆ ನೀವೇ ನೋಡಿ.

★★★

ಗಿರಾಕಿ: ಏನಯ್ಯಾ ಒಂದು ಪ್ಲೇಟ್ ಇಡ್ಲಿ ತಗೊಂಡು ಬಾ ಅಂದರೆ ಪ್ಲೇಟಿನಲ್ಲಿ ಎರಡು ಚಮಚ ಮಾತ್ರಾ ಕಾಣ್ತಾ ಇದೆ.

ಮಾಣಿ: ಸಾರ್ ದಯವಿಟ್ಟು ಚಮಚ ಎತ್ತಿ ನೋಡಿ. ಇಡ್ಲಿ ಕಾಣಿಸುತ್ತೆ.

★★★

ವೃದ್ಧಾಶ್ರಮದ ಮೇಲ್ವಿಚಾರಕ: 'ಮೇಡಂ ವೃದ್ಧಾಶ್ರಮಕ್ಕೆ ನೀವು ಏನಾದರೂ ಸಹಾಯ ಮಾಡಲೇಬೇಕು.'

ಮಹಿಳೆ: 'ಖಂಡಿತಾ! ವಯಸ್ಸಾದ ನಮ್ಮ ಅತ್ತೆ ಇದ್ದಾರೆ. ಅವರನ್ನು ಕರೆದುಕೊಂಡು ಹೋಗಿ.'

**ಸಂಗ್ರಹ: ಎಂ.ಕೆ.ಮಂಜುನಾಥ್, ಬೆಂಗಳೂರು**

## ಸೊನ್ನೆ ನೀಡಿದಾರೆ!

ತಿಮ್ಮ: ನಮ್ಮ ಕಾಲೇಜಿನ ಗಣಿತ ಲಕ್ಚರಿಗೆ ಯಾರು ಕೆಲಸ ಕೊಟ್ಟರೋ ಅವರು ಕೆಲಸಕ್ಕೇ ಲಾಯಕ್ಕಿಲ್ಲ.

ಸಂತಾ: ನಿಜ. ಅವರು ಈ ಸಲದ ಪರೀಕ್ಷೇಲಿ ನನಗೂ ಸೊನ್ನೆ ಅಂಕ ನೀಡಿದ್ದಾರೆ.

★★★

## ಜಪಾನಿನಿಂದ ತಂದಿದ್ದು!

ಸಾಂತಿ: ನನ್ನ ಕಿವಿಲಿರೋ ಹೊಸ ಹಿಯರಿಂಗ್ ಏಡ್ ನೋಡಿದಿರಾ ತಿಮ್ಮಿ? ನಮ್ಮವರು ಜಪಾನಿನಿಂದ ಮೊನ್ನೆ ತಂದಿದಾರೆ.

ತಿಮ್ಮಿ: ಅಬ್ಬಾ, ಹೌದಲ್ರಿ ಯಾವಾಗ ತಗೊಂಡ್ರಿ?

ಸಾಂತಿ: ತಿಂಡಿ ಆಯ್ತಾ ಅಂದ್ರಾ? ಆಗಿಲ್ಲಾರಿ.

**ಸಂಗ್ರಹ: ಪ್ರಕಾಶ.ಎಸ್. ಮನ್ನಂಗಿ**





## ಟ್ರೀಟ್‌ಮೆಂಟ್

ಮನೋರೋಗಿ: ಡಾಕ್ಟರ್, ದಿನಾಲೂ ನಾನು ಮಲಗೋ ಮಂಚದ ಕೆಳಗೆ ಯಾರೋ ಇದ್ದಾರೆ ಅನ್ನಿಸಿ ಸರಿಯಾಗಿ ನಿದ್ದೆ ಬರ್ತಾ ಇಲ್ಲ.

ಮನೋವೈದ್ಯ: ವಾರಕ್ಕೆ 2 ಸಿಟ್ಟಿಂಗ್‌ನಂತೆ 2 ವರ್ಷ ಟ್ರೀಟ್‌ಮೆಂಟ್ ತೊಗೊಳ್ಳಿ, ಸರಿ ಹೋಗತ್ತೆ. ಒಂದು ಸಿಟ್ಟಿಂಗ್‌ಗೆ ರೂ. 1000 ಫೀಸಾಗುತ್ತೆ.

ಎರಡು ತಿಂಗಳ ನಂತರ ಬಾರ್ ಒಂದರಲ್ಲಿ ಕಂಡ ಮನೋರೋಗಿಗೆ,

ಮನೋವೈದ್ಯ: ನೀನು ಒಂದೂ ಸಿಟ್ಟಿಂಗ್‌ಗೆ ಬರ್ಲಿಲ್ವಲಾ? ನಿನ್ನ ಕಾಯಿಲೆ ವಾಸಿಯಾಯ್ತಾ?

ಮನೋರೋಗಿ: ಒಂದೇ ಸಿಟ್ಟಿಂಗ್‌ಗೆ, ಒಬ್ಬ ಬಾರ್ ವೆಂಡರ್ ಕೇವಲ 600 ರೂಪಾಯಿಗೆ ವಾಸಿ ಮಾಡಿದ.

ಮನೋವೈದ್ಯ: ಆಶ್ಚರ್ಯದಿಂದ, 'ಅದು ಹೇಗೆ ಸಾಧ್ಯ'

ಮನೋರೋಗಿ: ಏನಿಲ್ಲ ಒಂದು ಸಿಂಪಲ್ ಅಡ್ವೈಸ್ ಅಷ್ಟೆ. ಮಂಚದ ನಾಲ್ಕು ಕಾಲನ್ನು ಕತ್ತರಿಸಿ ಹಾಕಲು ಹೇಳಿದ.

★★★

## ಮಂಡಿ ನೋವು

ಪೇಶಂಟ್: ಡಾಕ್ಟರ್, ನನ್ನ ಎಡಗಾಲು ಮಂಡಿ ತುಂಬಾ ನೊಯ್ತಿದೆ. ನಡೆಯೋದೇ ಕಷ್ಟ ಆಗ್ಬಿಟ್ಟಿದೆ.

ಡಾಕ್ಟರ್: (ಪರಿಶೀಲಿಸಿ) ನಿಮ್ಗೆ ಈಗ ವಯಸ್ಸೆಷ್ಟು?

ಪೇಶಂಟ್: ಅರವತ್ತಾಯ್ತು ಡಾಕ್ಟರ್

ಡಾಕ್ಟರ್: ಹಾಗಾದ್ರೆ ಇದು ಏಜ್ ಫ್ಯಾಕ್ಟ್. ನಿಮ್ಗೆ ಅರವತ್ತಾಯ್ತಲ್ಲ...?

ಪೇಶಂಟ್: ಸಾಧ್ಯವಿಲ್ಲ ಡಾಕ್ಟರೆ... ಯಾಕಂದ್ರೆ ನನ್ನ ಬಲಗಾಲು ಮಂಡಿಗೂ ಅಷ್ಟೇ ವಯಸ್ಸಾಗಿದೆಯಲ್ಲ...?

**ಸಂಗ್ರಹ: ಸುಮಾ ಕಳಸಾಪುರ, ಶಿವಮೊಗ್ಗ**